ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ

**Directorate of Medical Education**

ಆನಂದರಾವ್ ವೃತ್ತ, ಬೆಂಗಳೂರು-9.
Ananda Rao Circle, Bangalore-9.
Email:dmekarnataka@yahoo.com.

No. DME/NRC(1)/08 /2021-22 ದಿನಾಂಕ: 29 .06.2021.

ಇವರಿಗೆ,

ನಿರ್ದೇಶಕರು ಹಾಗೂ ಡೀನ್/ ನಿರ್ದೇಶಕರು/ಪ್ರಾಂಶುಪಾಲರು,
ಸ್ವಾಯುತ್ತ ಸರ್ಕಾರಿ ಸಂಸ್ಥೆಗಳು/ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ,
ಸರ್ಕಾರಿ ಹಾಗೂ ಖಾಸಗಿ ನರ್ಸಿಂಗ್ ಕಾಲೇಜುಗಳು, ಕರ್ನಾಟಕ.

ಮಾನ್ಯರೇ,

ವಿಷಯ: 2019-20 & 2020-21ನೇ ಶೈಕ್ಷಣಿಕ ಸಾಲಿನಲ್ಲಿ ಎಂ.ಎಸ್ಸಿ ಮತ್ತು ಪಿ.ಬಿ.ಬಿ.ಎಸ್ಸಿ ನರ್ಸಿಂಗ್ ಉನ್ನತ ವ್ಯಾಸಂಗಕ್ಕೆ ನಿಯೋಜನೆಗೊಂಡು ಕೋವಿಡ್ ಸಂಬಂಧ ಹಿಂಪಡೆದಿದ್ದ ಸೇವಾನಿರತ ಶುಶ್ರೂಷಾಧಿಕಾರಿಗಳನ್ನು ವ್ಯಾಸಂಗಕ್ಕೆ ಮರು ನಿಯೋಜಿಸುವ ಬಗ್ಗೆ.

ಉಲ್ಲೇಖ: ಆಯುಕ್ತರು, ಆಕುಕ ಸೇವೆಗಳು ಇಲಾಖೆ, ಸುತ್ತೋಲೆ ಸಂಖ್ಯೆ:ಎನ್ಆರ್ಎಸ್(2)/34/21-22 ದಿನಾಂಕ:19.05.2021.

2. ಈ ಕಛೇರಿ ಪತ್ರ ಸಂಖ್ಯೆ: ಡಿಎಂಇ/ಎನ್ಆರ್‌ಸಿ(1)/08/2021-22 ದಿನಾಂಕ:21.05.21, ನೆನಪೋಲೆ ಪತ್ರ ಸಂಖ್ಯೆ: ದಿನಾಂಕ:31.05.2021.
3. ಆಯುಕ್ತರು, ಆಕುಕ ಸೇವೆಗಳು ಇಲಾಖೆ ಸುತ್ತೋಲೆ ಸಂಖ್ಯೆ:ಎನ್ಆರ್ಎಸ್(2)/34/21-22, ದಿನಾಂಕ: 25.06.2021.

* * *

ಉಲ್ಲೇಖಿತ ಪತ್ರ(1) ರಂತೆ ಕೋವಿಡ್ ನಿಯಂತ್ರಣ ಸಲುವಾಗಿ ಎಂ.ಎಸ್ಸಿ ಮತ್ತು ಪಿ.ಬಿ.ಬಿ.ಎಸ್ಸಿ ನರ್ಸಿಂಗ್ ಉನ್ನತ ವ್ಯಾಸಂಗಕ್ಕೆ ನಿಯೋಜನೆಗೊಂಡಿದ ಸ್ವಾಯುತ್ತ ಸಂಸ್ಥೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಶುಶ್ರೂಷಾಧಿಕಾರಿಗಳನ್ನು ತಾತ್ಕಲಿಕವಾಗಿ ವ್ಯಾಸಂಗದಿಂದ ಹಿಂಪಡೆದು ನಿಯೋಜನಾ ಪೂರ್ವ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗಲು ಸೂಚಿಸಲಾಗಿತ್ತು.

ಉಲ್ಲೇಖ(2) ರಂತೆ ಸದರಿ ಶುಶ್ರೂಷಾಧಿಕಾರಿಗಳನ್ನು ವ್ಯಾಸಂಗದಿಂದ ಬಿಡುಗಡೆಗೊಳಿಸಿ ನಿಯೋಜನಾ ಪೂರ್ವ ಸ್ಥಳದಲ್ಲಿ ವರದಿ ಮಾಡಿಕೊಳಲ್ಲು ಸೂಚಿಸುವಂತೆ ತಮಗೆ ಆದೇಶಿಸಲಾಗಿತ್ತು. ಅದರಂತೆ ಬಿಡುಗಡೆಗೊಂಡು ಕರ್ತವ್ಯ ನಿರ್ವಹಿಸುತ್ತಿದ್ದ ಶುಶ್ರೂಷಾಧಿಕಾರಿಗಳನ್ನು ಪುನಃ ವ್ಯಾಸಂಗಕ್ಕೆ ಹಾಜರಾಗಲು ಉಲ್ಲೇಖಿತ ಪತ್ರ(3) ರಂತೆ ಸೂಚಿಸಿರುವುದರಿಂದ ಕರ್ತವ್ಯದಿಂದ ಬಿಡುಗಡೆಗೊಂಡು ತಮ್ಮ ಸಂಸ್ಥೆಗಳಿಗೆ ಹಾಜರಾಗುವ ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯ ಶುಶ್ರೂಷಾಧಿಕಾರಿಗಳನ್ನು ಕಾಲೇಜಿಗೆ ವರದಿ ಮಾಡಿಸಿಕೊಂಡು ವ್ಯಾಸಂಗದಲ್ಲಿ ಮುಂದುವರಿಸಲು ಸೂಚಿಸಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ,

ನಿರ್ದೇಶಕರು ವೈದ್ಯಕೀಯ ಶಿಕ್ಷಣ

Director
Directorate of Medical Education
Bangalore

<u>ಪ್ರತಿಯನ್ನು ಮಾಹಿತಿಗಾಗಿ</u>

ಸಂಬಂಧಿಸಿದ, ನಿರ್ದೇಶಕರು ಹಾಗು ಡೀನ್/ ನಿರ್ದೇಶಕರು/ಜಿಲ್ಲಾ ಶಸ್ತ್ರ ಚಿಕಿತ್ಸಕರು/ಸ್ವಾಯುತ್ತ ಸಂಸ್ಥೆಗಳ ನಿರ್ದೇಶಕರು/ ವೈದ್ಯಕೀಯ ಅಧೀಕ್ಷಕರು/ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು/ ತಾಲ್ಲೂಕ್ ಮುಖ್ಯ ವೈದ್ಯಾಧಿಕಾರಿಗಳು/ ಕಲ್ಯಾಣ ಅಧಿಕಾರಿಗಳು/ಮುಖ್ಯ ವೈದ್ಯಾಧಿಕಾರಿಗಳು/ಆಡಳಿತಾ ವೈದ್ಯಾಧಿಕಾರಿಗಳು ರವರಿಗೆ ಕಳುಹಿಸುತ್ತಾ ಶುಶ್ರೂಷಾಧಿಕಾರಿಗಳನ್ನು ಕೂಡಲೇ ಕರ್ತವ್ಯದಿಂದ ಬಿಡುಗಡೆಗೊಳಿಸಿ ತಿಳಿಸಿದೆ.